# D

SL. No. : W

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PR**
**Revised & Un-Revised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 85-K** **Code No. : 85-K**

# ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**( ಕನ್ನಡ ಭಾಷಾಂತರ / Kannada Version )**

**( ಹೊಸ ಪಠ್ಯಕ್ರಮ / New Syllabus )**

**( ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater )**

ದಿನಾಂಕ : 27. 06. 2018 ] [ Date : 27. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಸಹಾಯಕ ಸೈನ್ಯಪದ್ಧತಿಯನ್ನು ಪರಿಚಯಿಸಿದ ಬ್ರಿಟಿಷ್ ಗವರ್ನರ್ ಜನರಲ್

   (A) ವಾರನ್ ಹೇಸ್ಟಿಂಗ್ಸ್ (B) ಲಾರ್ಡ್ ವೆಲ್ಲೆಸ್ಲಿ

   (C) ಲಾರ್ಡ್ ಡಾಲ್‌ಹೌಸಿ (D) ಲಾರ್ಡ್ ಕಾರ್ನ್‌ವಾಲೀಸ್

2. 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಭಾರತ ಸರ್ಕಾರವು 2001ರಲ್ಲಿ ಜಾರಿಗೆ ತಂದ ಯೋಜನೆ

   (A) ರಾಷ್ಟ್ರೀಯ ಸಾಕ್ಷರತಾ ಮಿಷನ್ (B) ಸಾಕ್ಷರ ಭಾರತ

   (C) ಸರ್ವ ಶಿಕ್ಷಣ ಅಭಿಯಾನ (D) ರಾಷ್ಟ್ರೀಯ ವಯಸ್ಕರ ಶಿಕ್ಷಣ

3. **A ಪಟ್ಟಿ**ಯಲ್ಲಿ ನಾಯಕರು ಮತು **B ಪಟ್ಟಿ**ಯಲ್ಲಿ ಅವರ ದೇಶಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ಲೆನಿನ್ | (i) ಚೀನಾ |
| (b) ಹಿಟ್ಲರ್ | (ii) ರಷ್ಯಾ |
| (c) ಮುಸೋಲಿನಿ | (iii) ಜರ್ಮನಿ |
| (d) ಮಾವೋ ತ್ಸೆ ತುಂಗ್ | (iv) ಇಟಲಿ |

| | ***a*** | ***b*** | ***c*** | ***d*** |
|---|---|---|---|---|
| (A) | ii | iii | iv | i |
| (B) | i | ii | iii | iv |
| (C) | iv | i | ii | iii |
| (D) | iii | iv | i | ii |

4. ವಿಶ್ವಸಂಸ್ಥೆಯ ಪ್ರಧಾನ ಕಚೇರಿ ಇರುವ ಸ್ಥಳ

(A) ನ್ಯೂಯಾರ್ಕ್ (B) ಪ್ಯಾರಿಸ್

(C) ರೋಮ್ (D) ಜಿನೇವಾ

5. .................... ಬಾಲಕಾರ್ಮಿಕತನವನ್ನು ನಿಷೇಧಿಸುವ ಭಾರತ ಸಂವಿಧಾನದ ವಿಧಿ

(A) 21ನೇ ವಿಧಿ (B) 17ನೇ ವಿಧಿ

(C) 52ನೇ ವಿಧಿ (D) 24ನೇ ವಿಧಿ

6. ಈ ನಕ್ಷೆಯಲ್ಲಿ ಗುರುತಿಸಿರುವ ಅರಣ್ಯ ವಿಧಗಳಿಗೆ ಸರಿಯಾಗಿ ಹೋಲಿಕೆಯಾಗುವುದು :




(A) 1 — ಮ್ಯಾಂಗ್ರೋವ್ ಅರಣ್ಯಗಳು, 2 — ಮರುಭೂಮಿ ಅರಣ್ಯಗಳು, 3 — ನಿತ್ಯಹರಿದ್ವರ್ಣದ ಅರಣ್ಯಗಳು

(B) 1 — ನಿತ್ಯಹರಿದ್ವರ್ಣದ ಅರಣ್ಯಗಳು, 2 — ಮ್ಯಾಂಗ್ರೋವ್ ಅರಣ್ಯಗಳು, 3 — ಮರುಭೂಮಿ ಅರಣ್ಯಗಳು

(C) 1 — ಮ್ಯಾಂಗ್ರೋವ್ ಅರಣ್ಯಗಳು, 2 — ಹಿಮಾಲಯದ ಅಲ್ಪೈನ್ ಅರಣ್ಯಗಳು, 3 — ನಿತ್ಯಹರಿದ್ವರ್ಣದ ಅರಣ್ಯಗಳು

(D) 1 — ಮರುಭೂಮಿ ಅರಣ್ಯಗಳು, 2 — ನಿತ್ಯಹರಿದ್ವರ್ಣದ ಅರಣ್ಯಗಳು, 3 — ಮ್ಯಾಂಗ್ರೋವ್ ಅರಣ್ಯಗಳು

7. ಭಾರತವು ತನ್ನದೇ ಆದ ಪ್ರಾದೇಶಿಕ ಜಿ.ಪಿ.ಎಸ್. ವ್ಯವಸ್ಥೆಯನ್ನು ಹೊಂದಲು ಉಡಾಯಿಸಿರುವ ಉಪಗ್ರಹಗಳ ಸಂಖ್ಯೆ

(A) 3 (B) 5

(C) 6 (D) 7

8. ಈ ಕೆಳಗಿನವುಗಳಲ್ಲಿ ಪರೋಕ್ಷ ತೆರಿಗೆ

(A) ವರಮಾನ ತೆರಿಗೆ

(B) ಆಮದು–ರಫ್ತು ತೆರಿಗೆ

(C) ಸಂಪತ್ತಿನ ತೆರಿಗೆ

(D) ಕಂಪನಿ ತೆರಿಗೆ

9. ಬ್ಯಾಂಕುಗಳ ಬ್ಯಾಂಕ್

(A) ವಿಜಯಾ ಬ್ಯಾಂಕ್

(B) ಕೆನರಾ ಬ್ಯಾಂಕ್

(C) ಭಾರತೀಯ ರಿಸರ್ವ್ ಬ್ಯಾಂಕ್

(D) ಕಾರ್ಪೋರೇಷನ್ ಬ್ಯಾಂಕ್

10. ವರ್ಗೀಸ್ ಕುರಿಯನ್‌ರವರು 'ಬಿಳಿ ಕ್ರಾಂತಿಯ ಪಿತಾಮಹ' ಎಂದು ಹೆಸರುವಾಸಿಯಾಗಲು ಕಾರಣವಾದ ಅವರ ಸಾಧನೆ

(A) ಅಪೋಲೋ ವೈದ್ಯಶಾಲೆಗಳ ಪ್ರಾರಂಭ

(B) ಜೆಟ್ ವಾಯುಮಾರ್ಗಗಳ ಪ್ರಾರಂಭ

(C) ರಿಲಯನ್ಸ್ ಸಂಸ್ಥೆಯ ಪ್ರಾರಂಭ

(D) ಆನಂದ್/ಅಮುಲ್ ಹೈನುಗಾರಿಕೆ ಪ್ರಾರಂಭ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಜನಸಾಮಾನ್ಯರ ಚರಿತ್ರೆಯನ್ನು ಬರೆಯುವುದು ಚರಿತ್ರೆಕಾರರಿಗೆ ಒಂದು ಸವಾಲು ಏಕೆ ?

12. ಹಿಟ್ಲರ್‌ನು ಸರ್ವಾಧಿಕಾರಿಯಾಗಲು ಜರ್ಮನಿಯ ಉದ್ಯಮಿಗಳು ಹೇಗೆ ಸಹಾಯ ಮಾಡಿದರು ?

13. ಜಪಾನ್‌ನ ಯಾವ ಒಂದು ತಪ್ಪು ಹಿರೋಷಿಮಾ ಮತ್ತು ನಾಗಾಸಾಕಿಯ ಜನರು ಇಂದಿಗೂ ದುಷ್ಪರಿಣಾಮಗಳನ್ನು ಎದುರಿಸುವಂತೆ ಮಾಡಿತು ?

14. ಪಾಕಿಸ್ತಾನವು ಭಾರತದೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಲು ವಿಫಲವಾಗಿದೆ. ಏಕೆ ?

15. ಯುನಿಸೆಫ್ ಮಕ್ಕಳ ಅಭಿವೃದ್ಧಿಗೆ ಹೇಗೆ ಶ್ರಮಿಸುತ್ತಿದೆ ?

16. ಸಮಾನ ವೇತನ ಕಾಯ್ದೆಯನ್ನು ಯಾವಾಗ ಜಾರಿಗೆ ತರಲಾಯಿತು ?

17. ಹೆಣ್ಣು ಭ್ರೂಣ ಹತ್ಯೆಯಿಂದಾಗುವ ಪರಿಣಾಮವೇನು ?

18. ಗಂಗಾನದಿ ಮುಖಜ ಭೂಮಿಯ ಮ್ಯಾಂಗ್ರೋವ್ ಅರಣ್ಯಗಳನ್ನು ಸುಂದರ್‌ಬನ್ ಎಂದು ಕರೆಯಲು ಕಾರಣವೇನು ?

19. 'ಭಾರತದ ಸಿಲಿಕಾನ್ ಸಿಟಿ' ಎಂದು ಬೆಂಗಳೂರನ್ನು ಏಕೆ ಕರೆಯುತ್ತಾರೆ ?

20. ಪ್ರಪಂಚದಲ್ಲಿ ಮೊಟ್ಟಮೊದಲ ಬಾರಿಗೆ ಭೌಗೋಳಿಕ ಮಾಹಿತಿ ವ್ಯವಸ್ಥೆಯ ಬಳಕೆಯನ್ನು ಎಲ್ಲಿ ಪ್ರಾರಂಭಿಸಲಾಯಿತು ?

21. ಮುಂಬೈಯನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯಲಾಗುತ್ತಿತ್ತು. ಏಕೆ ?

22. ಸರ್ ಎಂ. ವಿಶ್ವೇಶ್ವರಯ್ಯನವರನ್ನು 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಕರೆಯುತ್ತಾರೆ. ಏಕೆ ?

23. ಮುಂಗಡ ಪತ್ರ ಎಂದರೇನು ?

24. ಫ್ರೆಂಚ್ ಭಾಷೆಯ ಬ್ಯಾಂಕ್ ( Banque ) ಪದದ ಅರ್ಥವೇನು ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 25 × 2 = 50

25. '18ನೇ ಶತಮಾನದ ಮೊದಲಾರ್ಧವು, ಮೊಘಲ್ ಸಾಮ್ರಾಜ್ಯದ ಮಹಾಪತನದ ಕಾಲವಾಗಿತ್ತು.' ಸಮರ್ಥಿಸಿ.

26. 'ಮದ್ರಾಸ್ ಶಾಂತಿ ಒಪ್ಪಂದ'ವು ಬ್ರಿಟಿಷರಿಗೆ ಅನಿವಾರ್ಯವಾಗಿತ್ತು. ಏಕೆ ?

27. ಭಾರತ ಇತಿಹಾಸದಲ್ಲಿ 19ನೇ ಶತಮಾನವನ್ನು 'ಭಾರತೀಯ ನವೋದಯ ಕಾಲ'ವೆಂದು ಕರೆಯಲಾಗಿದೆ. ಏಕೆ ?

28. ಜುನಾಗಢ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಗೊಳಿಸಲಾಯಿತು ?

**ಅಥವಾ**

ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮೋಚನೆಗೊಳಿಸಲಾಯಿತು ?

29. ಭಾರತದಲ್ಲಿ ಪ್ರಾದೇಶಿಕವಾದವು ಸಹಜವಾಗಿ ಬೆಳೆಯಲು ಕಾರಣವಾಗುವ ಅಂಶಗಳಾವುವು ?

30. ಪ್ರಪಂಚದಲ್ಲಿ ಭಾರತವು ಒಂದು ಪ್ರಭಾವಶಾಲಿ ರಾಷ್ಟ್ರವಾಗಿದೆ. ಹೇಗೆ ?

31. 'ಭಾರತದಲ್ಲಿ ಅಸ್ಪೃಶ್ಯತಾ ಆಚರಣೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ.' ಸಮರ್ಥಿಸಿ.

32. ಪಶ್ಚಿಮ ಕರಾವಳಿ ಮೈದಾನಗಳು ಪೂರ್ವ ಕರಾವಳಿ ಮೈದಾನಗಳಿಗಿಂತ ಹೇಗೆ ಭಿನ್ನವಾಗಿವೆ ?

33. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಸಿ.

34. ಮಣ್ಣಿನ ಸವೆತಕ್ಕೆ ಕಾರಣವಾಗುವ ಅಂಶಗಳನ್ನು ಪಟ್ಟಿಮಾಡಿ.

35. 'ಭಾರತದ ಕೃಷಿಯು ದ್ವಿತೀಯ ಹಾಗೂ ತೃತೀಯ ರಂಗದ ಉದ್ಯೋಗಗಳನ್ನು ಪೋಷಿಸುತ್ತಿದೆ.' ಸಮರ್ಥಿಸಿ.

36. ಭೂಕುಸಿತದ ಪರಿಣಾಗಳಾವುವು ?

37. 'ಜನಸಂಖ್ಯಾ ಸ್ಫೋಟವು ಹಲವು ಸಮಸ್ಯೆಗಳಿಗೆ ಮೂಲವಾಗಿದೆ.' ಈ ಹೇಳಿಕೆಯನ್ನು ಸಮರ್ಥಿಸಿ.

38. ಕೇವಲ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳು ದೇಶದ ಅಭಿವೃದ್ಧಿಯ ನೈಜ ಮಾಪಕವಾಗಲಾರವು. ಏಕೆ ?

39. ಜಾಗತೀಕರಣವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತಿದೆ. ಹೇಗೆ ?

40. ಸಮುದ್ರಯಾನದಲ್ಲಿ ನಾವಿಕರಿಗೆ ಸಹಾಯಕವಾದ ಹೊಸ ವೈಜ್ಞಾನಿಕ ಸಲಕರಣೆಗಳಾವುವು ?

41. ಹೈದರಾಬಾದ್–ಕರ್ನಾಟಕದ ಪ್ರದೇಶಗಳನ್ನು ಹೆಸರಿಸಿ.

42. ಕೋಮುವಾದದ ಪರಿಣಾಮಗಳನ್ನು ತಿಳಿಸಿ.

43. ವಿಶ್ವಸಂಸ್ಥೆಯ ಪ್ರಧಾನ ಅಂಗ ಸಂಸ್ಥೆಗಳಾವುವು ?

44. ಬಾಲಕಾರ್ಮಿಕರ ಸಮಸ್ಯೆಗೆ ಕಾರಣಗಳಾವುವು ?

45. ಭಾರತದಲ್ಲಿ ಕಂಡುಬರುವ ಮಣ್ಣಿನ ಮುಖ್ಯ ಪ್ರಕಾರಗಳಾವುವು ?

46. ಭಾರತದಲ್ಲಿ ಬೆಳೆಯುವ ಹೂವುಗಳನ್ನು ಹೆಸರಿಸಿ.

47. ನೀರಾವರಿಯ ವಿಧಗಳಾವುವು ?

48. ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು ?

49. ಬ್ಯಾಂಕ್ ಖಾತೆಯ ವಿಧಗಳಾವುವು ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. 1857 ರ ದಂಗೆಯ ವಿಫಲತೆಗೆ ಕಾರಣವಾದ ಅಂಶಗಳನ್ನು ವಿವರಿಸಿ.

***ಅಥವಾ***

ಶಿಕ್ಷಣ ಹಾಗೂ ಪತ್ರಿಕೋದ್ಯಮದ ಬೆಳವಣಿಗೆಯು ಭಾರತದ ಸ್ವಾತಂತ್ರ್ಯ ಚಳುವಳಿಗೆ ನಾಂದಿಯಾಯಿತು. ವಿವರಿಸಿ.

51. 'ಭಾರತ ಮತ್ತು ಚೀನಾಗಳ ನಡುವಿನ ಸಂಬಂಧವು ನಿರೀಕ್ಷಿತ ಫಲವನ್ನು ನೀಡುವಲ್ಲಿ ವಿಫಲವಾಗಿದೆ.' ಸಮರ್ಥಿಸಿ.

***ಅಥವಾ***

ಭಯೋತ್ಪಾದನೆಯು ಕಾನೂನುಬಾಹಿರ ಹಾಗೂ ಸಮಾಜದ್ರೋಹಿ ಕೃತ್ಯ. ಸಮರ್ಥಿಸಿ.

52. ನಿರುದ್ಯೋಗವು ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ವಿವರಿಸಿ.

***ಅಥವಾ***

ಮಹಿಳಾ ಸಬಲೀಕರಣವನ್ನು ಸಾಧಿಸುವಲ್ಲಿ ಮಹಿಳಾ ಸ್ವಸಹಾಯ ಸಮೂಹಗಳ ಪಾತ್ರವನ್ನು ವಿವರಿಸಿ.

53. ಶಕ್ತಿಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಕೈಗೊಳ್ಳಬಹುದಾದ ಕ್ರಮಗಳಾವುವು ?

***ಅಥವಾ***

ರಸ್ತೆ ಸಾರಿಗೆಯ ತೊಡಕುಗಳಾವುವು ?

54. ಭಾರತದ ಆರ್ಥಿಕ ಪ್ರಗತಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಮುಖ ಪಾತ್ರವಹಿಸಿವೆ. ಹೇಗೆ ?

***ಅಥವಾ***

ಪಂಚಾಯತ್ ರಾಜ್ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೇಗೆ ?

55. ವಿಮಾ ಸಂಸ್ಥೆಗಳಿಂದಾಗುವ ಅನುಕೂಲಗಳನ್ನು ಪಟ್ಟಿಮಾಡಿ.

***ಅಥವಾ***

ಉದ್ಯಮಿಯ ಗುಣಲಕ್ಷಣಗಳನ್ನು ಪಟ್ಟಿಮಾಡಿ.

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

56. ಸ್ವತಂತ್ರ ಭಾರತದ ಅಭಿವೃದ್ಧಿಗೆ ಜವಾಹರಲಾಲ್ ನೆಹರುರವರು ನೀಡಿರುವ ಕೊಡುಗೆಗಳನ್ನು ವಿವರಿಸಿ.

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4

a) $23\frac{1}{2}^{\circ}$ ಉತ್ತರ ಅಕ್ಷಾಂಶ

b) ನಾಗಾರ್ಜುನ ಸಾಗರ ಯೋಜನೆ

c) ಕೊಚ್ಚಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಅನುಕೂಲಗಳೇನು ? 4